ದಿನಾಂಕ: 09.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು : 10 ನೇ ಪ್ರತಿವಾದಿ ಪರ ಶ್ರೀ ಸಿ ಎಮ್ ಎಚ್ ವಕೀಲರಿಂದ**

1) ಅಬ್ದುಲ ಅಜೀಜ ಈ ದಾವೆಯನ್ನು ಮಾಡಿರುತ್ತಾರೆ. ಮಸೂತಿ ಗ್ರಾಮದಲ್ಲಿ 4 ಜಮೀನುಗಳು ಇರುತ್ತವೆ. ಸದರಿ ಜಮೀನುಗಳ ಸರ್ವೆ ನಂಬರ 292, 296 ಇರುತ್ತದೆ. ಈ ಜಮೀನು ನಮ್ಮ ತಂದೆಯವರು ತೀರಿಕೊಂಡ ನಂತರ ನಾವು ಎಲ್ಲರೂ ಅದಕ್ಕೆ ವಾರಸುದಾರರು ಆಗಿರುತ್ತೇವೆ ಎಂದು ಉತ್ತರಿಸುತ್ತಾರೆ. ಸದರಿ ಜಮೀನುಗಳು ಮೂಲತಃ ಯಾಸಿನಖಾನ ಬಾವಾಜಾನ ಮುಲ್ಲಾ ಅವರಿಗೆ ಸೇರಿರುತ್ತವೆ. ಯಾಸಿನಖಾನನ ತಂದೆಯ ಹೆಸರು ನುರುದ್ದೀನ ಉರ್ಫ ಬಾವಾಜಾನ ಮುಲ್ಲಾ ಇರುತ್ತದೆ. ಯಾಸಿನಖಾನನಿಗೆ ನವಾಬ ಶರೀಪ ಮುಲ್ಲಾ ಏನಾಗಬೇಕೆಂದು ಗೊತ್ತಿಲ್ಲ. ರಾಜೇಸಾಜ ಮುಲ್ಲಾ ಯಾರು ಎಂದು ನನಗೆ ಗೊತ್ತಿಲ್ಲ. ಹುಸೇನಬಿ ಮುಲ್ಲಾ ಯಾರು ಎಂದು ನನಗೆ ಗೊತ್ತಿಲ್ಲ.

2) ಯಾಸಿನಖಾನ ಅವರು ಹೆಸರಿನಲ್ಲಿ ಮೂಲತಃ ಸರ್ವೆ ನಂ 292, 296 ಇದ್ದವು. ರಾಜೇಸಾಜ ಮತ್ತು ಹುಸೇನಬಿ ಇಬ್ಬರೂ ಗಂಡ ಹೆಂಡತಿ ಇದ್ದು, ಅವರಿಗೆ ಮಕ್ಕಳು ಇಲ್ಲದ ಕಾರಣ ಯಾಸಿನಖಾನನನ್ನು ಮಗನಾಗಿ ಸ್ವೀಕರಿಸಿದ್ದರು ಎಂದರೆ ಸರಿ. ಯಾಸಿನಖಾನನ ಹೆಂಡತಿ ಹಸೆರು ಅಮೀನಾಬಿ ಇರುತ್ತದೆ ಯಾಸಿನಖಾನ ಮತ್ತು ಅಮೀನಾಬಿಗೆ ಮಕ್ಕಳು ಇರಲಿಲ್ಲ. ಯಾಸಿನಖಾನನಿಗೆ ಮಕ್ಕಳು ಇರಲಾರದ ಕಾರಣ 8 ನೇ ಪ್ರತಿವಾದಿಗೆ ಮಗನಾಗಿ ಸ್ವೀಕರಿಸಿದರು ಎಂದರೆ ಸರಿ. 8 ನೇ

ಪ್ರತಿವಾದಿಗೆ ಮಗನಾಗಿ ಸ್ವೀಕರಿಸಿದ ನಂತರ 9 ಜಮೀನುಗಳನ್ನು 8 ನೇ ಪ್ರತಿವಾದಿಯ ಹೆಸರಿಗೆ ಮಾಡಿದ್ದರು ಎಂದರೆ ಸರಿ. ಆ ಬಗ್ಗೆ ಡ ನಂಬರ ಎಮ್ ವಿ 229, 1327, 1477 2300, 5730 ಮಂಜೂರು ಆಯಿತು ಎಂದರೆ ಸರಿ. ಈ ಡ ಗಳ ಬಗ್ಗೆ ನೀವು ಎಲ್ಲಿಯಾದರು ಪ್ರಶ್ನಿಸಿ ತಕರಾರು ಅರ್ಜಿಯನ್ನು ಸಲ್ಲಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಜಮೀನುಗಳು 8 ನೇ ಪ್ರತಿವಾದಿಯ ಹೆಸರಿಗೆ ಬಂದ ನಂತರ ಸದರಿ ಜಮೀನುಗಳಲ್ಲಿರುವ ಬೆಳೆಗಳನ್ನು 10 ನೇ ಪ್ರತಿವಾದಿಗೆ ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. ಈ ವಿಷಯಗಳು ಗೊತ್ತಿದ್ದರು ಸಹ ಸುಳ್ಳು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ವಾದಿಯರ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನೀವು ಯಾವ ಆಧಾರದ ಮೇಲೆ ಪ್ರತಿವಾದಿಯಾಗಿ ಸೇರ್ಪಡೆಯಾಗಿದ್ದೀರಿ ಎಂದರೆ ವಾರಸಾ ಆಧಾರದ ಮೇಲೆ ಈ ದಾವೆಯಲ್ಲಿ ಸೇರ್ಪಡೆಯಾಗಿರುತ್ತೇನೆ. 8 ನೇ ಪ್ರತಿವಾದಿ ಸದರಿ ಜಮೀನುಗಳನ್ನು ಯಾರಿಗೂ ಹಸ್ತಾಂತರಣ ಮಾಡಿಲ್ಲ ಎಂದರೆ ಸರಿಯಲ್ಲ.

3) ನನ್ನ ತಂದೆಯ ಹೆಸರು ಮೈನುದ್ದೀನ ನುರುದ್ದೀನ ಖಾಜಿ ಇರುತ್ತದೆ. ವಾದ ಪತ್ರದಲ್ಲಿ ನಿಮ್ಮ ಹೆಸರು ನುರುದ್ದೀನ ಜನಕ ತಂದೆ ಮೈನುದ್ದೀನ ದತ್ತಕ ತಂದೆ ಯಾಸಿನಸಾಬು ಎಂದು ನಮೂದು ಆಗಿದೆ ಎಂದರೆ ತಪ್ಪು ಎಂದು ಉತ್ತರಿಸುತ್ತಾರೆ. ನೀವು ಯಾಸಿನಖಾನವರಿಗೆ ದತ್ತಕ ಹೋಗಿದ್ದರಿಂದ ದಾವಾದ ಆಸ್ತಿಗಳಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ನಾನು ದತ್ತಕ ಹೋಗಿಲ್ಲ ಎಂದು ಉತ್ತರಿಸುತ್ತಾರೆ.

4) ಪ್ರತಿವಾದಿ 2( ಎ) ರಿಂದ 2 (ಡಿ)ಅವರು ಏನಾಗಬೇಕು ಎಂದರೆ ಮೈಬೂಬಿ ನನ್ನ ಅಕ್ಕ, ಜಾಕೀರಹುಸೇನ ಅಕ್ಕನ ಮಗನಾಬೇಕು ಎಂದು

ಉತ್ತರಿಸುತ್ತಾರೆ. ಪ್ರತಿವಾದಿ 2(ಎ) ರಿಂದ 2(ಡಿ) ಅವರಿಗೆ ಮತ್ತು ದಾವಾದ ಆಸ್ತಿಗಳಲ್ಲಿ ಯಾವುದೇ ಸಂಬಂಧ ಇಲ್ಲ ಎಂದರೆ ಇದೆ ಎಂದು ಉತ್ತರಿಸುತ್ತಾರೆ. ದಾವಾದ ಜಮೀನುಗಳು ಎನ್ ಟಿ ಪಿ ಸಿ ಅವರು ಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದರೆ ಸರಿ. ಸದರಿ ಜಮೀನುಗಳಿಗೆ ಪರಿಹಾರ ಹಣ ಮಂಜೂರು ಆಯಿತು ಎಂದರೆ ಸರಿ. ಸದರಿ ದಾವಾದ ಜಮೀನುಗಳು ಸ್ವಾಧೀನ ಆಗಿರುವ ಬಗ್ಗೆ ನನಗೆ ನೋಟಿಸು ಬಂದಿರುತ್ತದೆ. ನೋಟಿಸ ಬಂದ ನಂತರ ಸದರಿ ಪರಿಹಾರ ಹಣವನ್ನು ಪಡೆಯಲು ನೀವು ಹೋಗಿದ್ದೀರಾ ಎಂದರೆ ಆಗ 8 ನೇ ಪ್ರತಿವಾದಿಯು ದಾವೆಯನ್ನು ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಈ ಕುರಿತು ನೀವು ಯಾವುದಾದರೂ ನ್ಯಾಯಾಲಯದಲ್ಲಿ ದಾವೆಯನ್ನು ಮಾಡಿದ್ದೀರಾ ಎಂದರೆ ಇಲ್ಲ ಮಾಡಿದ್ದೇವೆ ಎಂದು ಉತ್ತರಿಸುತ್ತಾರೆ. ನೀವು ಮಾಡಿದಂತಹ ದಾವಾದ ನಂಬರ ಏನಿದೆ ಎಂದರೆ ಸಾಕ್ಷಿಯು 398/2011 , 2/2014 ಎಂದು ಉತ್ತರಿಸುತ್ತಾರೆ. ಈ ದಾವೆಗಳನ್ನು ನೀವೇ ಮಾಡಿರುತ್ತೀರಿ ಎಂದರೆ ಸರಿ. ಭೂ ಪರಿಹಾರ ಪಡೆಯಲು ಬಂದಂತಹ ನೋಟಿಸಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಮಂಜೂರಾದ ಹಣವನ್ನು 8 ನೇ ಪ್ರತಿವಾದಿಯ ಹೆಸರಿಗೆ ಮಂಜೂರು ಆಗಿದ್ದರಿಂದ ಸದರಿ ಹಣದಲ್ಲಿಯು ಸಹ 10 ನೇ ಪ್ರತಿವಾದಿಗೇ ನೀಡಬೇಕೆಂಬ ಸಂದರ್ಭದಲ್ಲಿ ನೀವು ತಕರಾರು ಮಾಡಿದ್ದರಿಂದ 8 ನೇ ಪ್ರತಿವಾದಿಯು ಅಸಲು ದಾವಾ ನಂ 2/2014 ನ್ನು ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ಮಂಜೂರದ ಹಣವನ್ನು ನೀವು ಪಡೆಯುವ ದುರುದ್ದೇಶದಿಂದ ಈ ದಾವೆಯಲ್ಲಿ ಅರ್ಜಿ ಹಾಕಿ ಸೇರ್ಪಡೆಯಾಗಿದ್ದೀರಿ ಎಂದರೆ ಸರಿಯಲ್ಲ. ನೀವು ಬೇರೆಯವರಿಗೆ ದತ್ತಕ ಹೋಗಿದ್ದರಿಂದ ದಾವಾದ ಆಸ್ತಿಗಳಲ್ಲಿ

ಯಾವುದೇ ಭಾಗ ಕೇಳಲು ಹಕ್ಕು ಇಲ್ಲ ಎಂದರೆ ನಾನು ದತ್ತಕ ಹೋಗೇ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಈ ದಾವೆಯಲ್ಲಿ ಇರುವಂತಹ ವಾದಿ ಮತ್ತು ಪ್ರತಿವಾದಿಯರು ಯಾರು ಎಂದು ಗೊತ್ತಿಲ್ಲದಿದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ **:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,
Sd/-

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ